# ಭಾಗ–11

## ಪ್ರಮುಖ ಲೇಖನಗಳು

### 1. ಕೊರೋನಾ ಸಂಕಷ್ಟವನ್ನು ಯುವ ಸಮುದಾಯ ಅವಕಾಶವಾಗಿ ಪರಿವರ್ತಿಸಿಕೊಳ್ಳಬೇಕು

**ಯುವಕರೇ, ಕೃಷಿಯತ್ತ ಬನ್ನಿ; ಬಂಗಾರ ಬೆಳೆಯಿರಿ:** ಕೋವಿಡ್–19 ಜಗತ್ತನ್ನು ಮತ್ತೊಂದು ದಿಕ್ಕಿನತ್ತ ಕರೆದೊಯ್ಯುವ ಮುನ್ಸೂಚನೆ ಕಾಣುತ್ತಿದೆ. ಕೊರೋನಾ ನಂತರದ ಜಗತ್ತಿನ ಅಭಿವೃದ್ಧಿಯ ಕುರಿತಂತೆ ಹೊಸ ವಿಶ್ಲೇಷಣೆಗಳು ಆರಂಭವಾಗಿವೆ. ಕುಸಿದುಹೋದ ಆರ್ಥಿಕತೆಯಿಂದಾಗಿ ಉದ್ಯೋಗ ಸಮಸ್ಯೆ ತಲೆದೋರಿದೆ.

ಭಾರತ ಜಗತ್ತಿನ ಅತಿದೊಡ್ಡ ಮಾನವ ಸಂಪನ್ಮೂಲವನ್ನು ಹೊಂದಿದೆ. ವಿಶ್ವದ ಶ್ರೇಷ್ಠ ಕಂಪನಿಗಳು ಭಾರತೀಯರ ಜ್ಞಾನಕ್ಕೆ ಮಣೆ ಹಾಕಿ ಸ್ವಾಗತಿಸುತ್ತವೆ ಎಂಬುದು ಎಲ್ಲರೂ ಒಪ್ಪತಕ್ಕ ವಿಚಾರ. ಆದರೆ ಅವರೆಲ್ಲರೂ ಕೊರೋನಾ ಕಾರಣದಿಂದಾಗಿ ಇಂದು ಮರಳಿ ಮನೆಗೆ ಬಂದಿದ್ದಾರೆ. ಇವರನ್ನು ಇಲ್ಲಿಯೇ ಉಳಿಸಿಕೊಂಡು ಸಮೃದ್ಧ ರಾಷ್ಟ್ರ ಕಟ್ಟಲು ಇದೊಂದು ಸುವರ್ಣಾವಕಾಶವಾಗಿದೆ. ನಾವು ವೈಜ್ಞಾನಿಕವಾಗಿ, ತಾಂತ್ರಿಕವಾಗಿ ಎಷ್ಟೇ ಮುಂದುವರೆದಿದ್ದರೂ, ಭಾರತದ ಆತ್ಮ ಕೃಷಿಯಲ್ಲಿದೆ. ಕೃಷಿಯಲ್ಲಿ ಸರ್ವತೋಮುಖ ಅಭಿವೃದ್ಧಿ ಸಾಧಿಸದೇ ಭಾರತ ಸದೃಢವಾಗಲು ಸಾಧ್ಯವಿಲ್ಲ. ಹೀಗಾಗಿ ಕೊರೋನಾ ಸಂಕಷ್ಟವನ್ನು ಅವಕಾಶವಾಗಿ ಬಳಸಿಕೊಂಡು ಕೃಷಿಯಲ್ಲಿ ಅಭಿವೃದ್ಧಿ ಸಾಧಿಸಲು ಸಜ್ಜಾಗೋಣ.

ಭಾರತದ ರೈತರು ಹಲವಾರು ವಿಧದ ಬೆಳೆಗಳನ್ನು ಕಂಡುಹಿಡಿದು ಜಗತ್ತಿಗೆ ಪರಿಚಯಿಸಿದ್ದಾರೆ. ಸ್ವಾತಂತ್ರ್ಯದ ನಂತರ ನಗರೀಕರಣ ಮತ್ತು ಕೈಗಾರಿಕೀಕರಣದಿಂದಾಗಿ ಭಾರತೀಯ ಕೃಷಿ ಕಾರ್ಮಿಕರು ಕೃಷಿಯಲ್ಲಿ ಆಸಕ್ತಿ ಕಳೆದುಕೊಂಡು ನಗರಗಳತ್ತ ವಲಸೆ ಹೋದರು. ದೊಡ್ಡ–ದೊಡ್ಡ ಜಮೀನ್ದಾರಿಕೆಗಳು ಕಡಿಮೆಯಾದವು. ಯುವ ಪೀಳಿಗೆ ಕೃಷಿಯಿಂದ ವಿಮುಖರಾಗುತ್ತಿರುವುದು ಕೃಷಿ ಕ್ಷೇತ್ರಕ್ಕೆ ದೊಡ್ಡ ಸವಾಲಾಗಿದೆ. ಆದರೂ ಸ್ವಾತಂತ್ರ್ಯ ಬಂದಾಗ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿ ಇತ್ತು. ಹಸಿರು ಕ್ರಾಂತಿ ಬಳಿಕ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದ್ದೇವೆ.

ಉದ್ಯಮ ಮತ್ತು ಸೇವಾ ವಲಯಕ್ಕೆ ಹೋಲಿಸಿದರೆ, ಕೃಷಿ ಕ್ಷೇತ್ರ ಅತ್ಯಂತ ಕಡಿಮೆ ಬೆಳವಣಿಗೆ ಕಂಡಿದೆ. 1951–52ರಿಂದ ಇಲ್ಲಿಯವರೆಗೆ ಉದ್ಯಮ ಕ್ಷೇತ್ರದ ಬೆಳವಣಿಗೆ ವಾರ್ಷಿಕ 6.1% ರಷ್ಟಾಗಿದ್ದರೆ, ಸೇವಾ ವಲಯ 6.2% ಪ್ರಗತಿ ಕಂಡಿದೆ. ಆದರೆ ಈ ಅವಧಿಯಲ್ಲಿ ಕೃಷಿ ಕ್ಷೇತ್ರದ ಪ್ರಗತಿ 2.9% ರಷ್ಟು ಮಾತ್ರ. ಈ ಅಸಮಾನತೆಯ ಫಲವಾಗಿಯೇ, ದೇಶದ ಜಿಡಿಪಿಯಲ್ಲಿ ಕೃಷಿ ಕ್ಷೇತ್ರದ ಪಾಲು ಕುಸಿದಿದೆ. ಸ್ವಾತಂತ್ರ್ಯ ಬಂದಾಗ ದೇಶದ ಒಟ್ಟು ಆಂತರಿಕ ಉತ್ಪನ್ನದಲ್ಲಿ (ಜಿಡಿಪಿ) ಕೃಷಿಯ ಪಾಲು ಶೇ.53% ರಷ್ಟಿತ್ತು. ಆದರೆ 2018–19ರ ಪ್ರಕಾರ 14.39% ಗೆ ಇಳಿದಿದೆ.

ಕೊರೋನಾ ನಮ್ಮನ್ನು ಹಳ್ಳಿಗಳತ್ತ ಮುಖ ಮಾಡುವಂತೆ ಮಾಡಿದೆ. ಹಳ್ಳಿ ಸೇರಿದ ಯುವ ಜನತೆ ಕೃಷಿಯಲ್ಲಿ ತೊಡಗುವ ದಿಟ್ಟ ನಿರ್ಧಾರ ಕೈಗೊಳ್ಳಬೇಕು. ಇದಕ್ಕೆ ಸಮಾಜ ಸರ್ಕಾರ, ಹೆತ್ತವರಿಂದ ಪ್ರೇರಣೆ ಸಿಗಬೇಕು. ಕೃಷಿಯಲ್ಲಿ ಸಾಧನೆ ಮಾಡಿದವರು ತುಂಬ ಜನ ಇರಬಹುದು. ಆದರೆ, ಪರಿಪೂರ್ಣತೆ ಸಾಧಿಸಿದವರು ಯಾರೂ ಇಲ್ಲ. ಪ್ರತಿವರ್ಷ ಹೊಸ ಅವಿಷ್ಕಾರಗಳು ಬರುತ್ತಿವೆ. ಪ್ರಕೃತಿ ಕೂಡ ಕೃಷಿಯನ್ನು ಯಾರ ಕೈಗೂ ಕೊಟ್ಟಿಲ್ಲ. ಪ್ರಕೃತಿಯೊಂದಿಗಿನ ಹೋರಾಟವೇ ಕೃಷಿ. ವೈಜ್ಞಾನಿಕ ಸ್ಪರ್ಶ ಕೊಟ್ಟು ವ್ಯಾಪಾರ ಮನೋಭಾವದಿಂದ ದುಡಿದರೆ ಕೃಷಿಯಲ್ಲಿ ಲಾಭವಿದೆ.

ತಂತ್ರಜ್ಞಾನ ಅರಿತ ಯುವಕರು ಕೃಷಿಯಲ್ಲಿ ತೊಡಗಿಕೊಂಡರೆ ವೈಜ್ಞಾನಿಕ ಟಚ್ ಕೊಡಲು ಸಾಧ್ಯವಿದೆ. ಒಬ್ಬ ವಿದ್ಯಾವಂತ ಯುವಕ ತನ್ನದೇ ಆದ ವಿಧಾನದಲ್ಲಿ ಕೃಷಿ ಮಾಡಬಲ್ಲ ಎಂಬ ಭರವಸೆ ಇದೆ. ಯಾವುದೇ ಕ್ಷೇತ್ರದಲ್ಲಿ ಒಂದೇ ದಿನದಲ್ಲಿ ಯಶಸ್ಸು ಸಿಗುವುದಿಲ್ಲ. ವೈಜ್ಞಾನಿಕ ಮಾದರಿ ಅನುಸರಿಸಿ ಫಲವತ್ತತೆ ಕಾಪಾಡಿಕೊಂಡು ಪರಿಶ್ರಮದಿಂದ ದುಡಿದರೆ ಯಶಸ್ಸು ನಿಶ್ಚಿತ. ಕೃಷಿಯಲ್ಲಿ ನೆಮ್ಮದಿ, ಖುಷಿ, ಆರೋಗ್ಯ ಎಲ್ಲವೂ ಇದೆ.

**ಕೃಷಿತೋ ನಾಸ್ತಿ ದುರ್ಭಿಕ್ಷ:** ಕೃಷಿ ಕೇವಲ ಕುಟುಂಬದ ಮೂಲ ಕೆಲಸವಾಗದೇ, ಲಾಭದಾಯಕ ಉದ್ಯಮವಾಗಿ ರೂಪುಗೊಳ್ಳಬೇಕು. ಸಾಮಾನ್ಯ ಕೂಲಿ ಕೆಲಸ ಎಂಬ ಭಾವನೆಯಿಂದ ಹೊರಬಂದು, ಕೃಷಿಗೂ ವೃತ್ತಿಪರತೆ ತುಂಬಬೇಕು. ವ್ಯವಸಾಯ ಅನಕ್ಷರಸ್ಥರು, ಶಾಲೆ ಬಿಟ್ಟವರು ಮಾಡುವ ಉದ್ಯೋಗವಾಗದೇ,

ಕೃಷಿಗಾಗಿಯೇ ಹೊಸದನ್ನು ಕಲಿತು ಕೃಷಿಯಲ್ಲಿ ಬದುಕು ರೂಪಿಸಿಕೊಳ್ಳುವ ಗಟ್ಟಿತನ ಬರಬೇಕು. ಮೊದಲು ರೈತ, ನಂತರ ವ್ಯಾಪಾರಿ ಹಾಗೂ ವಿಜ್ಞಾನಿಯಾಗಬೇಕು. ಇದರಿಂದ ರೈತರ ಜೀವನ ಉಜ್ವಲ ಆಗುತ್ತದೆ.

**ಕೃಷಿ ಆಧಾರಿತ ಉದ್ಯಮಕ್ಕೆ ಆದ್ಯತೆ ಸಿಗಲಿ:** ಅಗ್ರಿಕಲ್ಚರ್ ಜೊತೆಗೆ ಅಗ್ರಿಬ್ಯುಸಿನೆಸ್ ಬೆಳೆಯಬೇಕು. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಆಗಬೇಕು. ಕೃಷಿಗೆ ಪೂರಕ ಮಾರುಕಟ್ಟೆ ಸ್ಥಳೀಯ ಮಟ್ಟದಲ್ಲಿಯೇ ದೊರೆಯಬೇಕು. ಆದ್ದರಿಂದ ನಮ್ಮಲ್ಲಿ ಕೃಷಿ ಆಧಾರಿತ ಕೈಗಾರಿಕಾ ವಲಯಗಳ ವಿಸ್ತರಣೆಯಾಗಬೇಕು. ಯುವಕರು ಕೃಷಿಗೆ ಬಂದರೆ ವ್ಯವಸಾಯದ ಜೊತೆಗೆ ಹೈನುಗಾರಿಕೆ, ಕುರಿ, ಕೋಳಿ, ಮೊಲ ಸಾಕಾಣಿಕೆ, ಆಹಾರ ಹಾಗೂ ಮಸಾಲೆ ಪದಾರ್ಥ ಸಂಸ್ಕರಣೆ, ಅಣಬೆ ಬೇಸಾಯ, ಜೇನು, ರೇಷ್ಮೆ ಸಾಕಾಣಿಕೆ, ಎರೆಹುಳು ಗೊಬ್ಬರ, ಹಣ್ಣು ತರಕಾರಿ, ಮೀನುಗಾರಿಕೆ, ಗ್ರೀನ್ ಹೌಸ್, ನರ್ಸರಿ, ಬೆಲ್ಲ ತಯಾರಿಕೆ, ಜೈವಿಕ ಹಾಗೂ ರಸಗೊಬ್ಬರ ಮಾರಾಟದಂತಹ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬಹುದು.

ತಮ್ಮ ಹಳ್ಳಿಗಳಲ್ಲಿಯೇ ಕೃಷಿಗೆ ಮಾರುಕಟ್ಟೆ ಒದಗಿಸಲು ಉದ್ಯಮಗಳನ್ನು ಪ್ರಾರಂಭಿಸಲು ಬಹುರಾಷ್ಟ್ರಿಯ ಕಂಪನಿಗಳಲ್ಲಿ ದುಡಿಯುವ ಯುವಕರಿಗೆ ವಿಪುಲ ಅವಕಾಶಗಳಿವೆ. ಸಕ್ಕರೆ, ಕಾಟನ್, ರೈಸ್ ಮಿಲ್, ಫ್ಲೋರ್‌ಮಿಲ್, ಜ್ಯೂಸ್ ಇಂಡಸ್ಟ್ರೀ, ಆಯಿಲ್‌ಮಿಲ್, ಫುಡ್ ಪ್ರಾಡೆಕ್ಟ್, ಕೃಷಿ ಉಪಕರಣಗಳ ತಯಾರಿಕಾ ಘಟಕ, ಸ್ಟಾರ್ಚ್ ಇಂಡಸ್ಟ್ರೀಯಂತಹ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸ್ಥಾಪನೆ ಸ್ಥಳೀಯವಾಗಿ ಕೃಷಿಗೆ ಉತ್ತಮ ಮಾರುಕಟ್ಟೆ ಒದಗಿಸುವುದರೊಂದಿಗೆ ಸ್ಥಳೀಯವಾಗಿ ಉದ್ಯೋಗ ಸೃಷ್ಟಿಗೂ ಸಹಕಾರಿಯಾಗುತ್ತದೆ. ಕೊರೋನಾದಿಂದ ಉದ್ಯೋಗ ಕಳೆದುಕೊಂಡವರಿಗೂ ಐಟಿಯಂತಹ ಉದ್ಯಮಗಳಲ್ಲಿನ ಹಣಕಾಸಿನ ವಹಿವಾಟು ಕೃಷಿಗೆ ವರ್ಗಾವಣೆಯಾಗಬಹುದು. ಹೊಸ ಹಣವನ್ನು ಸೃಷ್ಟಿಸುವುದು ಕೃಷಿ ಮತ್ತು ಕೃಷಿ ಉದ್ಯಮಗಳಿಂದ ಮಾತ್ರ ಸಾಧ್ಯವಿದೆ.

**ಪರಾಮರ್ಶೆ ಅಗತ್ಯವಿದೆ:** ಯುವಕರನ್ನು ಕೃಷಿಗೆ ಸೆಳೆಯಲು ಸರ್ಕಾರ ಯುವ ಕೃಷಿ ನೀತಿ ಪ್ರಕಟಿಸಬೇಕು. ಕೃಷಿಯಲ್ಲಿ ತೊಡಗಿಕೊಳ್ಳುವ ಯುವಕರನ್ನು ಪ್ರೋತ್ಸಾಹಿಸಬೇಕು. ಸರ್ಕಾರದ ಯೋಜನೆಗಳಲ್ಲಿ ಪಾರದರ್ಶಕತೆ ಮೂಡಬೇಕು. ಸುಧಾರಿತ ಪದ್ಧತಿ, ಹೊಸ ತಂತ್ರಜ್ಞಾನ, ಪೂರಕ ಮಾರುಕಟ್ಟೆ ವ್ಯವಸ್ಥೆ, ಭೂಮಿಯ ಫಲವತ್ತ ವೃದ್ಧಿಗೆ ರೈತರಿಗೆ ಮಾರ್ಗದರ್ಶನ ನೀಡಬೇಕು. ಏಕಬೆಳೆ ಪದ್ಧತಿಗಿಂತ ಬಹುಬೆಳೆ ಪದ್ಧತಿಗೆ ನಮ್ಮ ರೈತ ಬದಲಾಗಬೇಕು. ಇದು ರೈತನ ಆರ್ಥಿಕಾಭಿವೃದ್ಧಿಯ ಜೊತೆಗೆ ಮಾರುಕಟ್ಟೆಯಲ್ಲಿ ಸ್ಥಿರತೆ ಕಾಪಾಡಿಕೊಳ್ಳಲು ಅನುಕೂಲವಾಗುತ್ತದೆ. ಭಾರತದಲ್ಲಿ ಕೃಷಿ ತಂತ್ರಜ್ಞಾನ ಸಂಶೋಧನೆ ಬೆಳೆಯಬೇಕು.

ಭಾರತದಲ್ಲಿನ ಜಲಸಂಪತ್ತು ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ. ರಾಷ್ಟ್ರದ ನೀರು ಹಂಚಿಕೆ ಮತ್ತು ಜಲನೀತಿಯನ್ನು ಪುನರ್ ಪರಾಮರ್ಶಿಸಬೇಕು. ಏಕೆಂದರೆ ಭಾರತದ ಬಹುದೊಡ್ಡ ಬಯಲು ಪ್ರದೇಶಗಳು ನೀರಾವರಿ ಕೊರತೆಯನ್ನು ಅನುಭವಿಸುತ್ತಿವೆ. ಇದು ಕೃಷಿ ಅಭಿವೃದ್ಧಿಗೆ ಮಾರಕವಾಗಿದೆ. ಹೆದ್ದಾರಿ, ಸ್ಮಾರ್ಟ್‌ಸಿಟಿಗಳಿಗಿಂತ ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಬೇಕು. ಅರಣ್ಯೀಕರಣಕ್ಕೆ ಉತ್ತೇಜನ ನೀಡಿದರೆ ಭವಿಷ್ಯದ ಮಳೆಯ ಪ್ರಮಾಣದಲ್ಲಿ ಸ್ಥಿರತೆಯನ್ನು ಕಾಪಾಡಿಕೊಳ್ಳಬಹುದು. ಅಂತರ್ಜಲ ವೃದ್ಧಿ, ನೀರಿನ ಮಿತಬಳಕೆ, ತ್ಯಾಜ್ಯ ನೀರಿನ ಸಂಸ್ಕರಣೆಗೆ ಆದ್ಯತೆ ನೀಡಬೇಕು.

**ಭಾರತದ ಯುವಕರೇ ಪವಾಡ ಮಾಡಲು ಸಜ್ಜಾಗಿ:** ಈ ಭೂಮಿಯಲ್ಲಿ ಅಗಣಿತವಾದ ಸಂಪತ್ತು ತುಂಬಿದೆ. ನೆಲ ಕೊಡುವ ಸಂಪತ್ತನ್ನು ಎಲ್ಲಿಯೂ ಪಡೆಯಲು ಸಾಧ್ಯವಿಲ್ಲ. ಜ್ಞಾನಯೋಗಿ ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮೀಜಿ ತುಂಬ ಅರ್ಥಗರ್ಭಿತವಾಗಿ ಹೇಳುತ್ತಾರೆ. "ನೀವು ಒಂದು ಟನ್ ಬಂಗಾರವನ್ನು ಎಷ್ಟೋ ವರ್ಷಗಳ ಕಾಲ ಮನೆಯಲ್ಲಿಟ್ಟರೂ ಅದರ ಗಾತ್ರ ಅಷ್ಟೆ ಇರುತ್ತದೆ. ಅದೇ ಒಂದು ಹಣ್ಣನ್ನು ಭೂಮಿಯಲ್ಲಿಟ್ಟರೆ ಅದು ಸಾವಿರ, ಲಕ್ಷ ಕೋಟಿಯಾಗುತ್ತದೆ. ಇದು ನೆಲದ ತಾಕತ್ತು ಇದುವೇ ಪವಾಡ" ಈ ಮಾತುಗಳು ಕೃಷಿಯ ಸಮೃದ್ದಿಯನ್ನು ಪ್ರತಿಬಿಂಬಿಸುತ್ತದೆ.

ಭಾರತದ ನೀರು ಮತ್ತು ಮಣ್ಣಿಗೆ ಜಗತ್ತಿಗೆ ಅನ್ನ ನೀಡುವ ಶಕ್ತಿಯಿದೆ. ಭಾರತಾಂಬೆ ನಮ್ಮನ್ನು ಸೇರಿದಂತೆ ವಿಶ್ವವನ್ನು ಸಲಹುವ ಅನ್ನಪೂರ್ಣೇಶ್ವರಿ. ಅತಿಹೆಚ್ಚು ಕೃಷಿ ಉತ್ಪನ್ನಗಳನ್ನು ಬೆಳೆಯುವ ಜಗತ್ತಿನ ಎರಡನೇ ದೇಶ ನಮ್ಮದು. ವಾರ್ಷಿಕ 275 ಮಿಲಿಯನ್ ಟನ್‌ನಷ್ಟು ಆಹಾರ ಧಾನ್ಯಗಳನ್ನು ಭಾರತ ಉತ್ಪಾದಿಸುತ್ತದೆ. ಆ ಮೂಲಕ ಶೇ.25ರಷ್ಟು ಜಾಗತಿಕ ಉತ್ಪಾದನೆ ಹಾಗೂ ಶೇ.27ರಷ್ಟು ಜಾಗತಿಕ ಉಪಯೋಗದ ಪಾಲನ್ನು ಭಾರತ ಹೊಂದಿದೆ. ಗೋಧಿ, ಅಕ್ಕಿ, ದ್ವಿದಳ ಧಾನ್ಯಗಳು, ಕಬ್ಬು, ಸೆಣಬು, ಹತ್ತಿ ನೆಲಗಡಲೆ ಉತ್ಪಾದನೆಯಲ್ಲಿ ಭಾರತ ಜಾಗತಿಕವಾಗಿ 2ನೇ ಸ್ಥಾನದಲ್ಲಿದೆ. ಜಗತ್ತಿನ ಒಟ್ಟು ಉತ್ಪಾದನೆಯ ಶೇ.10.9 ರಷ್ಟು

ಹಣ್ಣುಗಳು ಮತ್ತು 8.6% ತರಕಾರಿಗಳನ್ನು ಭಾರತದಲ್ಲಿ ಬೆಳೆಯಲಾಗುತ್ತದೆ. ಭಾರತ ವಿಶ್ವದ ಅತಿ ದೊಡ್ಡ ಪಾಲು ಉತ್ಪಾದಕ ದೇಶ.

ಪ್ರಧಾನಿ ನರೇಂದ್ರ ಮೋದಿ ಅತ್ಮನಿರ್ಭರ ಭಾರತದ ಸಂಕಲ್ಪ ತೊಟ್ಟಿದ್ದಾರೆ. ಭಾರತದಲ್ಲಿ ಉತ್ಪಾದನೆಯಾದ ವಸ್ತುಗಳಿಗೆ ಜಾಗತಿಕ ಮನ್ನಣೆ ಸಿಗುತ್ತಿದೆ. ಕೊರೋನಾ ಸಂದಿಗ್ಧತೆಯಲ್ಲಿ ಜಗತ್ತು ಭಾರತವನ್ನು ಆಶಾವಾದದ ಕಂಗಳಿಂದ ನೋಡುತ್ತಿದೆ. ಈ ಎಲ್ಲವನ್ನು ಅರಿತು ನೀರಾವರಿ ಕೃಷಿ, ಕೃಷಿ ಉದ್ಯಮಗಳೆಡೆಗೆ ನಮ್ಮ ಗಮನ ಕೇಂದ್ರಿಕೃತವಾಗಬೇಕು.

ಯುವ ಜನತೆ ಕೃಷಿ ಹಾಗೂ ಕೃಷಿ ಆಧಾರಿತ ಉದ್ಯಮಗಳಲ್ಲಿ ತೊಡಗಿಕೊಳ್ಳಬೇಕು. ನೀರು ಮನುಕುಲದ ಶ್ರೇಷ್ಠ ಅಮೃತ, ಜಲಾಶಯಗಳು ಅಕ್ಷಯಪಾತ್ರೆ, ರೈತನೇ ದೈವ, ಕೃಷಿ ಉದ್ಯಮಗಳೇ ಆಧುನಿಕ ಭಾರತದ ದೇವಾಲಯಗಳು ಎಂದು ಅರಿತು ದಿಟ್ಟ ಹೆಜ್ಜೆ ಇಟ್ಟರೆ ಅದುವೇ ವಿಶ್ವಗುರು ಭಾರತ, ನಾವೇ ಜಗತ್ತಿನ ದೊಡ್ಡಣ್ಣ.

**ಲೇಖಕರು: ಸಂಗಮೇಶ್ ಆರ್ ನಿರಾಣಿ,**
**ಉತ್ತರ ಕರ್ನಾಟಕ ಸಮಗ್ರ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷರು**
**ಆಧಾರ:ಉದಯವಾಣಿ, ದಿನಾಂಕ:21.07.2020**